**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 26/2017** **ಅ.ಸಾ.8**

**ಚಾ.ಸಾ.5**

| | | |
|---|---|---|
| ಸಾಕ್ಷಿದಾರರ ಹೆಸರು | - | ಆದಿತ್ಯ |
| ತಂದೆಯ ಹೆಸರು | - | ಸಂತೋಷ ನಾಯಕ್ |
| ವಯಸ್ಸು | - | 17 ವರ್ಷ |
| ಉದ್ಯೋಗ | - | ವಿದ್ಯಾಥಿ. |
| ವಿಳಾಸ | - | ಕುದಿ ಗ್ರಾಮ, ಉಡುಪಿ |

ದಿನಾಂಕಃ 04-04-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

ಮೃತ ಸಂತೋಷ ನಾಯಕ್ ನನ್ನ ತಂದೆ. ಚಾಸಾ1 ನನ್ನ ತಾಯಿ. ಚಾಸಾ2 ನನ್ನ ಚಿಕ್ಕಪ್ಪ ಚಾಸಾ3 ನನ್ನ ಅಜ್ಜಿ. ಚಾಸಾ4 ನನ್ನ ದೊಡ್ಡಮ್ಮ. ಚಾಸಾ.6 ನನ್ನ ತಂಗಿ. ಚಾಸಾ7 ನನ್ನ ಚಿಕ್ಕಪ್ಪ, ಚಾಸಾ8 ನನ್ನ ಅಜ್ಜ. ಚಾಸಾ9 ನನ್ನ ದೊಡ್ಡಮ್ಮ. ಸುಮಾರು 9 ವರ್ಷಗಳ ಹಿಂದೆ ನನ್ನ ತಂದೆ ಕೊಲೆಯಾಗಿರುತ್ತಾರೆ. ಅವರನ್ನು ಯಾರು ಕೊಲೆ ಮಾಡಿದ್ದಾರೆ ಎಂದು ಗೊತ್ತಿಲ್ಲ. ನಾನು ಯಾವುದೇ ಘಟನೆಯನ್ನು ನೋಡಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಹಾಗೂ ಗೈರುಹಾಜರಿರುವ ಆರೋಪಿತರು ಹಾಗೂ ಮೃತ 1 ಮತ್ತು 7 ನೇ ಆರೋಪಿತರನ್ನು ಈ ಹಿಂದೆ ನೋಡಿರುವುದಿಲ್ಲ. ಆರೋಪಿತರು ನಮ್ಮನ್ನು ಅಪಹರಣ ಮಾಡಿ ಸುಲಿಗೆ ಮಾಡಿರುವುದಿಲ್ಲ. ನನ್ನ ತಂದೆ ಕೊಲೆಯಾದ ಬಗ್ಗೆ ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುವುದಿಲ್ಲ.

**( ಈ ಹಂತದಲ್ಲಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)**

**<u>ಪಾಟಿ ಸವಾಲುಃ ಸರಕಾರಿ  ಅಭಿಯೋಜಕರಿಂದಃ</u>**

ದಿನಾಂಕ 03-12-2016 ರಂದು ರಾತ್ರಿ 1-00 ಗಂಟೆಗೆ ಮನೆಯಲ್ಲಿ ಮಲಗಿದ್ದಾಗ ಕೆಲವರು ಮನೆಯ ಬಾಗಿಲು ಬಡಿದು ಒಳಗೆ ಪ್ರವೇಶಿಸಿದ್ದು ನೋಡಿದಾಗ ಐದು ಮಂದಿ ಇದ್ದು ಕೈಯಲ್ಲಿ ಪಿಸ್ತೂಲು ತೋರಿಸಿ ಕಪಾಟನ್ನು ಒಡೆದು ಹಣವನ್ನು ತೆಗೆದು ದೇವರ ಗುಡಿಯನ್ನು ಒಡೆದು ನೆಲದಲ್ಲಿ ಅಡಗಿಸಿ ಇಟ್ಟ ಹಣಕ್ಕಾಗಿ ಶೋಧಿಸಿ ಬೆಳಗ್ಗಿನ ಜಾವ ಅವರು ಬಂದ ಕಾರಿನಲ್ಲಿ ನಮ್ಮನ್ನು ಬಲಾತ್ಕಾರವಾಗಿ ಕುಳ್ಳಿರಿಸಿ ನಮ್ಮನ್ನು ಕರೆದುಕೊಂಡು ಹೋಗಿದ್ದು ಸದ್ರಿ ಕಾರು ನನ್ನ ತಂದೆಗೆ ಸೇರಿದ ಕಾರು ಆಗಿದ್ದು, ನಂತರ ಆರೋಪಿತರು ಬೆಳಿಗ್ಗೆ 7-00 ಗಂಟೆ ಸುಮಾರಿಗೆ ನಮ್ಮನ್ನು ಒರ್ವಾಡಿಯ ಮನೆಯೊಂದಕ್ಕೆ ಕರೆದುಕೊಂಡು ಹೋಗಿ ಮೃತ ಒಂದನೇ ಆರೋಪಿ ಹಣಕಾಸಿನ ಸಮಸ್ಯೆ ಇತ್ಯರ್ಥ ಮಾಡಬೇಕೆಂದು ಹೇಳಿ ನಮ್ಮನ್ನು ಬೇರೆ ಮನೆಗೆ ಸ್ಥಳವಾಂತರಿಸಿದ್ದು ಅಲ್ಲಿ ಹೋಗಿ ಆರೋಪಿತರು ನನ್ನ ಅಮ್ಮ ಮತ್ತು ದೊಡ್ಡಮ್ಮನ ಬಳಿ ಇದ್ದ ಚಿನ್ನಾಭರಣಗಳನ್ನು ಸುಲಿಗೆ ಮಾಡಿಕೊಂಡು ಪರ್ಕಳದ ಬಳಿ ನಮ್ಮನ್ನು ಬಿಟ್ಟು ಹೋಗಿದ್ದು ನಂತರ ಅಪಹರಣ ಮಾಡಿ ನನ್ನ ತಂದೆಯನ್ನು ಕೊಲೆ ಮಾಡಿ ನೀರಿಲ್ಲದ ಪಾಳು ಬಾವಿಯಲ್ಲಿ ಹೂತು ಹಾಕಿರುತ್ತಾರೆ ಎಂದು ನನ್ನ ಅಮ್ಮ ತಿಳಿಸಿದ ಬಗ್ಗೆ ಈಗ ಓದಿ ಹೇಳಿದಂತೆ ನಿಪಿ27 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಆರೋಪಿತರ  ಪರವಾಗಿ ಪಾಟೀ ಸವಾಲುಃ</u>**  ಇಲ್ಲ  ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು  ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.